## ನಾಯಕರು ಹೇಳಿದ್ದು – 1

ನನಗೆ ಈ ಬಾವುಟ ಈ ಹೋರಾಟಗಳ ನಂಟು ಅಂಟಿದ್ದು ಒಂದು ವಿಶಿಷ್ಟ ಸನ್ನಿವೇಶದಲ್ಲಿ. ಸುಮಾರು ಐವತ್ತು ವರ್ಷಗಳ ಹಿಂದಿನ ಕತೆ ಅದು. ನಾನು ಕಲಿತ ಸರ್ಕಾರಿ ಶಾಲೆ ಇದ್ದಿದ್ದು ನಮ್ಮ ಮನೆಗೆ ಕೂಗಳತೆ ದೂರದಲ್ಲಿ. ನನಗೆ ಸ್ಕೂಲು ಅಂದರೆ ಹೆದರಿಕೆಯಿಂದ ಜೀವ ಬಾಯಿಗೆ ಬರ್ತಿತ್ತು. ಎಲ್ಲ ಹಳ್ಳಿ ಮಕ್ಕಳ ಹಾಗೆ ನನಗೂ ಇಂಗ್ಲಿಷು, ಗಣಿತ ಅಂದರೆ ವಿಪರೀತ ಎನ್ನುವಷ್ಟು ಭಯ. ಸಾಲದೂಂತ ಆ ಗಣಿತದ ಮೇಡಂ ಸರಿಯಾಗಿ ಲೆಕ್ಕ ಮಾಡದವರನ್ನ ಕ್ಲಾಸಿನ ತುಂಬ ಅಟ್ಟಾಡಿಸಿಕೊಂಡು ಹೊಡೀತಿದ್ದರು. ಇನ್ನು ಇಂಗ್ಲಿಷಿನ ಮೇಷ್ಟರ ಕೈಗೆ ಬೆತ್ತ ಬಂದ್ರೆ ಸಾಕು ಹುಡುಗರಿಗೆ ಎಲ್ಲಾ ಆಗಿ ಬಿಡ್ತಿತ್ತು. ಪಾಪ ಅವರಿಬ್ರೂ ಒಳ್ಳೆಯವರೇ ಇರ್ಬೇಕು. ನಾನೇ ದಡ್ಡನಾಗಿದ್ದೆ ಅನ್ನಿಸ್ತದೆ. ಅವತ್ತೊಂದು ದಿನ ಮೊದಲನೇ ಪೀರಿಯಡ್ಡೇ ಇಂಗ್ಲಿಷ್ ಇತ್ತು. ಪೆಟ್ಟು ಬೀಳೋದಂತೂ ಗ್ಯಾರಂಟಿ ಅಂತ ಗೊತ್ತಿತ್ತು. ಸ್ಕೂಲಿಗೆ ಹೋಗದಿದ್ದರೆ ಆ ಕನ್ನಡ ಪಂಡಿತರು ಬೆಳಿಗ್ಗೇನೆ ಮನೆ ಮುಂದೆ ಹಾಜರಾಗ್ತಾರೆ. ಸ್ಕೂಲಿಗೆ ಹೋಗಿಲ್ಲಾಂತ ಗೊತ್ತಾದ್ರೆ ಅಪ್ಪ ದನಕ್ಕೆ ಬಡಿದಂಗೆ ಬಡೀತಾನೆ. ನನಗಿಂತ ದನ ಮೇಯಿಸೋ ಹುಡುಗರೇ ವಾಸಿ. ಕೆರೆ ಕುಂಟೇಲಿ ಈಜ್ಕೊಂಡು ಮರದ ನೆರಳಲ್ಲಿ ನಿದ್ದೆ ಹೊಡ್ಕೊಂಡು ಎಷ್ಟೊಂದು ಸುಖವಾಗಿರ್ತಾರೆ ಎಂದು ಬೈದುಕೊಂಡೇ ಸ್ಕೂಲಿಗೆ ಹೊರಟಿದ್ದೆ. ಹಾಗೇನೆ ಸ್ಕೂಲಿಂದ ಪಾರಾಗೋದಕ್ಕೆ

